ದಿನಾಂಕಃ 08.07.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು : ವಾದಿಗಳ ಪರ ವಕೀಲರಿಂದ :</u>**

ನನಗೆ 6 ನೇ ಪ್ರತಿವಾದಿಯವರು ಈ ವ್ಯವಹಾರಕ್ಕೂ ಮುಂಚಿನಿಂದಲೂ ಪರಿಚಯ. 6 ನೇ ಪ್ರತಿವಾದಿಯರ ಕುಟುಂಬದ ಸದಸ್ಯರ ಬಗ್ಗೆ ನನಗೆ ಗೊತ್ತಿತ್ತು. ಆಸ್ತಿ ಖರೀದಿಸುವಾಗ 6 ನೇ ಪ್ರತಿವಾದಿಯರ ಕುಟುಂಬದ ವಂಶವೃಕ್ಷವನ್ನು ಪಡೆದುಕೊಂಡಿದ್ದೆ, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ವಂಶವೃಕ್ಷವನ್ನು ಹಾಜರುಪಡಿಸದಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ನನಗೆ ಮರೆತು ಹೋಗಿರುತ್ತದೆ ಎನ್ನುತ್ತಾರೆ.

**2.** ಪ್ರತಿವಾದಿ-6 ರವರ ಕುಟುಂಬದಲ್ಲಿ ವಿಭಾಗವಾಗಿದೆ ಎಂದು ಹೇಳಿದ್ದು, ಸದರಿ ವಿಭಾಗಕ್ಕೆ ನೀವು ಸಾಕ್ಷಿದಾರರೇ ಎಂದರೆ ಅಲ್ಲ. ಸದರಿ ವಿಭಾಗದ ಪಾಲುಪಟ್ಟಿ ನೋಂದಣಿ ಆಗಿದೆಯೇ ಎಂದರೆ ಸಾಕ್ಷಿ ಅದು ಪಂಚಾಯಿತಿ ಪಾಲುಪಟ್ಟಿಯಾಗಿದ್ದು, ನೋಂದಣಿಯಾಗಿಲ್ಲ ಎನ್ನುತ್ತಾರೆ. ಸದರಿ ಪಾಲುಪಟ್ಟಿಯನ್ನು ನಾನು ನೋಡಿರುತ್ತೇನೆ. ಅದರಲ್ಲಿ ಇಬ್ಬರು ಸಾಕ್ಷಿದಾರರಿದ್ದು, ಅದರಲ್ಲಿ 3 ನೇ ವಾದಿ ಹಾಗೂ 1 ನೇ ವಾದಿಯ ಗಂಡ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ. ಸದರಿ ಪಾಲುಪಟ್ಟಿಯಲ್ಲಿ 4 ಜನ ಪಕ್ಷಗಾರರು ಇರುತ್ತಾರೆ. ಸದರಿ ಪಾಲುಪಟ್ಟಿಯಲ್ಲಿ ವಾದಿಯರಿಗೆ ಭಾಗ ಕೊಟ್ಟಿಲ್ಲ. 6 ನೇ ಪ್ರತಿವಾದಿ ಪರಿಚಯವಿರುವ ಕಾರಣ ವಾದಿಗಳಿಗೆ ಆಸ್ತಿ ಕೊಡಬಾರದು ಎಂದು ನಾವುಗಳು ಪಾಲುಪಟ್ಟಿಯನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಗಳು, ಪ್ರತಿವಾದಿಗಳ ಕುಟುಂಬದಲ್ಲಿ ಯಾವುದೇ ಪಾಲುಪಟ್ಟಿಯಾಗಿಲ್ಲ ಎಂದರೆ ಸರಿಯಲ್ಲ.

**3.** 6 ನೇ ಪ್ರತಿವಾದಿಯು ಅವರ ಸಹೋದರ ಮಹೇಂದ್ರರವರಿಂದ ಆಸ್ತಿ ಖರೀದಿಸಿದ ಬಗ್ಗೆ ಕ್ರಯಪತ್ರ ಹಾಜರುಪಡಿಸಿಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಅಜ್ಜಪಾಲಿಗೆ ಬಂದ

ಆಸ್ತಿಗಳ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿಲ್ಲ. ನಿಡಿ-12 ನ್ನು 6 ನೇ ಪ್ರತಿವಾದಿ ಹೇಳಿ ಬರೆಯಿಸಿರುತ್ತಾರೆ. ನಿಡಿ-12 ನ್ನು ಬರೆಯಿಸಿಕೊಳ್ಳುವಾಗ ದಾಖಲೆಗಳನ್ನು ಪರಿಶೀಲಿಸಿರುತ್ತೇನೆ, ಯಾವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆಂದು ನೆನಪಾಗುತ್ತಿಲ್ಲ. ನಾನು ಅಜ್ಜಪಾಲಿಗೆ ಸಂಬಂಧಿಸಿದಂತೆ 6 ನೇ ಪ್ರತಿವಾದಿಯೊಂದಿಗೆ ಸೇರಿಕೊಂಡು ಸುಳ್ಳು ಮಾಹಿತಿ ನೀಡಿ ಕ್ರಯಪತ್ರ ಬರೆಯಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**4.** ದಾವಾ ಆಸ್ತಿಗಳ ಮೇಲೆ ವಾದಿಗಳಿಗೆ ವಿಭಾಗದ ಹಕ್ಕು ಇದ್ದರೂ ಅವರಿಗೆ ಮೋಸ ಮಾಡುವ ಸಲುವಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಾನು ಹೇಳಿರುವ ಪಾಲುಪಟ್ಟಿಗೆ 3 ನೇ ವಾದಿ ಹಾಗೂ 1 ನೇ ವಾದಿಯ ಗಂಡ ಸಹಿ ಮಾಡಿರುವುದಿಲ್ಲ ಹಾಗೂ ಸದರಿ ಸಹಿಗಳನ್ನು ನಾವು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಡಿ-12 ರಲ್ಲಿ 6 ನೇ ಪ್ರತಿವಾದಿಗೆ ಮೈನರ್ ಮಕ್ಕಳು ಇರುವುದಾಗಿ ಬರೆದಿದ್ದು, ಸದರಿ ಮೈನರ್ ಮಕ್ಕಳು ಯಾರು ಎಂದರೆ ಸಾಕ್ಷಿ ನನಗೆ ಮರೆತು ಹೋಗಿರುತ್ತದೆ ಎನ್ನುತ್ತಾರೆ. ಸದರಿ ಕ್ರಯಪತ್ರಕ್ಕೆ 6 ನೇ ಪ್ರತಿವಾದಿಯ 3 ಜನ ಮಕ್ಕಳೂ ಸಹಿ ಮಾಡಿರುತ್ತಾರೆ. ಸದರಿ 3 ಜನ ಮಕ್ಕಳನ್ನು ಹೊರತುಪಡಿಸಿ ಬೇರೆ ಮಕ್ಕಳು 6 ನೇ ಪ್ರತಿವಾದಿಗೆ ಇರುತ್ತಾರೋ, ಇಲ್ಲವೋ ಗೊತ್ತಿಲ್ಲ. ಸದರಿ ಕ್ರಯಪತ್ರ ವಾದಿಗಳಿಗೆ ಬಂಧನಪಡಿಸುವುದಿಲ್ಲ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿಗೆ ಸದರಿ ಸ್ವತ್ತನ್ನು ಮಾರಾಟ ಮಾಡುವಂತಹ ಕುಟುಂಬದ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ವಾದಿಗಳಿಗೆ ಸಮಾನ ಹಕ್ಕು ಇದೆ ಎಂದರೆ ಸರಿಯಲ್ಲ.

***ಈ ಹಂತದಲ್ಲಿ ವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಾಕಾಶ ಕೋರಿದ್ದು, ಸಮಯಾವಾಕಾಶ ನೀಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**